
# ಬಕಾಸುರನ ಕಥೆ

ಚಿತ್ರ : ಲತಾ

ಕಥೆ: ಸ್ವಾಮಿ ರಾಘವೇಶಾನಂದ

ಪಾಂಡವರನ್ನು ಕೊಲ್ಲಲು ದುರ್ಯೋಧನನು ಒಂದು ಅರಗಿನ ಅರಮನೆಯನ್ನು ಕಟ್ಟಿಸಿದ.


1







ಆದರೆ ವಿದುರನ ಸಹಾಯದಿಂದ, ಭೀಮನಿಗೆ ದುರ್ಯೋಧನನ ಕುತಂತ್ರ ತಿಳಿಯಿತು. ಅವನು ತನ್ನ ತಾಯಿಯನ್ನು ಹಾಗೂ ಸಹೋದರರನ್ನು ಹೊತ್ತುಕೊಂಡು ಸುರಂಗಮಾರ್ಗದ ಮೂಲಕ ಅರಗಿನ ಮನೆಯಿಂದ ಹೊರಬಂದ.

3




ಪಾಂಡವರು ಸಾವಿನಿಂದ ಹಾಗೆ ತಪ್ಪಿಸಿಕೊಂಡ ನಂತರ, ದೀನ ಬ್ರಾಹ್ಮಣರಂತೆ ವೇಷ ಮರೆಸಿಕೊಂಡು ಏಕಚಕ್ರ ನಗರವನ್ನು ತಲುಪಿದರು. ಅಲ್ಲಿ ಬ್ರಾಹ್ಮಣನೊಬ್ಬನ ಮನೆಯಲ್ಲಿ ತಮಗೆ ಆಶ್ರಯ ನೀಡಲು ಕೇಳಿಕೊಂಡರು.
4
ನನ್ನ ಮನೆಯಲ್ಲಿ ನೀವು ಎಷ್ಟು ದಿನ ಇರುತ್ತೀರೋ ಅಷ್ಟು ದಿನವೂ ಅಗತ್ಯವಾಗಿ ಇರಬಹುದು.
ಒಂದು ದಿನ ಎಂದಿನಂತೆ ಯುಧಿಷ್ಠಿರ ಮತ್ತು ಇತರರು ಭಿಕ್ಷಾಟನೆಗೆ ಹೊರಟಿದ್ದರು. ಭೀಮ ಮತ್ತು ಕುಂತಿ ಮನೆಯಲ್ಲಿ ಉಳಿದಿದ್ದರು. ಆಗ.....
5
ಅಮ್ಮ, ಯಾರೋ ಅಳುತ್ತಿರುವ ಹಾಗಿದೆಯಲ್ಲವೆ?
ಬಾ, ಹೋಗಿ ನೋಡೋಣ.
ಆ ಮನೆಯ ಮತ್ತೊಂದು ಕಡೆ ಬ್ರಾಹ್ಮಣ ಮತ್ತು ಅವನ ಹೆಂಡತಿ ಅಳುತ್ತಿದ್ದರು. ಕುಂತಿ ಮತ್ತು ಭೀಮನಿಗೆ ಗಾಬರಿಯಾಯಿತು.
6
ನಿಮಗೇನಾದರೂ ತೊಂದರೆಯಾಗಿದೆಯೇ ? ಏಕೆ ಹೀಗೆ ಅಳುತ್ತಿದ್ದೀರಿ?
ನಮ್ಮ ದುರದೃಷ್ಟದ ಬಗ್ಗೆ ಏನು ಹೇಳಲಿ?
ಬ್ರಾಹ್ಮಣನ ಹೆಂಡತಿ ತಮಗೊದಗಿರುವ ಆಪತ್ತನ್ನು ವಿವರಿಸಿದಳು
7
ಇಲ್ಲೇ ಹತ್ತಿರದ ಒಂದು ಗುಡ್ಡದಲ್ಲಿ ಬಕಾಸುರನೆಂಬ ರಾಕ್ಷಸನಿದ್ದಾನೆ. ಅವನು ಗ್ರಾಮಕ್ಕೆ ನುಗ್ಗಿ ತನಗಿಷ್ಟಬಂದಂತೆ ಇಲ್ಲಿನ ಜನರನ್ನು ಕೊಲ್ಲುತ್ತಿದ್ದಾನೆ.


ಆಗ ಅಲ್ಲಿನ ಗ್ರಾಮಸ್ಥರೆಲ್ಲರೂ ಸೇರಿ ಅವನೊಡನೆ ಒಂದು ಒಪ್ಪಂದಕ್ಕೆ ಬಂದರು.
8
ಬಕಾಸುರ, ಪ್ರತಿದಿನ ನಿನ್ನ ಊಟಕ್ಕಾಗಿ ಒಂದು ಬಂಡಿಯ ತುಂಬಾ ಭಕ್ಷ್ಯ, ಬಂಡಿ ಹೊಡೆಯುವವನು ಹಾಗೂ ಎರಡು ಎತ್ತುಗಳನ್ನು ಕಳಿಸಿಕೊಡುತ್ತೇವೆ. ದಯವಿಟ್ಟು ಈ ರೀತಿ ಯದ್ವಾತದ್ವಾ ನಮ್ಮ ಗ್ರಾಮಸ್ಥರನ್ನು ಕೊಲ್ಲುವುದನ್ನು ನಿಲ್ಲಿಸು.
ಹಾ! ಹಾ! ಹಾ! ನೀವೇನಾದರೂ ಒಪ್ಪಂದವನ್ನು ಮುರಿದಿರೋ ನಿಮ್ಮಲ್ಲಿ ಪ್ರತಿಯೊಬ್ಬರನ್ನೂ ಕೊಲ್ಲುತ್ತೇನೆ.
ಬ್ರಾಹ್ಮಣನ ಹೆಂಡತಿ ಅಳುತ್ತಾ ಹೇಳಿದಳು
9
ಈ ದಿನ ಬಕಾಸುರನಿಗೆ ಊಟ ತಲುಪಿಸುವುದು ನಮ್ಮ ಸರದಿ. ನಮಗಿರುವವನು ಒಬ್ಬನೇ ಮಗ. ಅವನು ಸತ್ತರೆ, ಈ ವೃದ್ಧಾಪ್ಯದಲ್ಲಿ ನಮ್ಮನ್ನು ನೋಡಿಕೊಳ್ಳುವವರು ಯಾರು?
ಕುಂತಿಗೆ ಕನಿಕರವುಂಟಾಯಿತು.
10
ಅಮ್ಮಾ, ನಿಮಗಿರುವುದು ಒಬ್ಬನೇ ಮಗ. ಆದರೆ ನನಗೆ ಐದು ಜನ ಮಕ್ಕಳಿದ್ದಾರೆ. ನಿಮ್ಮ ಮಗನಿಗೆ ಬದಲಾಗಿ ನನ್ನ ಮಗ ಭೀಮ ಹೋಗುತ್ತಾನೆ, ಅಳಬೇಡ.
ಆದರೆ ಕುಂತಿಯ ಮಾತಿಗೆ ಆ ಬ್ರಾಹ್ಮಣ ದಂಪತಿಗಳು ಒಪ್ಪಲಿಲ್ಲ.
11
ನೀವು ನಮ್ಮ ಅತಿಥಿಗಳು. ಅತಿಥಿಗಳನ್ನು ದೇವರಂತೆ ಕಾಣಬೇಕು. ಆದ್ದರಿಂದ ನಿಮ್ಮ ಮಾತು ನಮಗೆ ಒಪ್ಪಿಗೆಯಾಗದು.


ಕುಂತಿ ಅವರನ್ನು ಸಮಾಧಾನ ಪಡಿಸಿದಳು.
ನಾವು ನಿಮ್ಮ ಅತಿಥಿಗಳಾಗಿರುವಾಗ ನಿಮ್ಮ ಸಂಕಟವನ್ನು ಹಂಚಿಕೊಳ್ಳುವುದು ನಮ್ಮ ಕರ್ತವ್ಯ. ಅಲ್ಲದೆ ಭೀಮನು ಬಕಾಸುರನನ್ನೇ ಕೊಲ್ಲುವಷ್ಟು ಬಲಾಢ್ಯ. ಬಕಾಸುರ ಸತ್ತರೆ ಇಡೀ ಗ್ರಾಮವೇ ನೆಮ್ಮದಿಯಾಗಿರುವುದು. ಹೋರಾಟದಲ್ಲಿ ಒಂದು ವೇಳೆ ಭೀಮನು ಸತ್ತರೆ ನನಗೆ ಇನ್ನೂ ನಾಲ್ಕು ಮಕ್ಕಳಿದ್ದೇ ಇರುತ್ತಾರೆ.
12
ಕೊನೆಗೆ ಒಲ್ಲದ ಮನಸ್ಸಿನಿಂದ ಬ್ರಾಹ್ಮಣ ದಂಪತಿಗಳು ಕುಂತಿಯ ಮಾತಿಗೆ ಒಪ್ಪಿದರು. ಭೀಮನು ಒಂದು ಗಾಡಿ ಭಕ್ಷ್ಯದೊಡನೆ ಬಕಾಸುರನನ್ನು ಎದುರಿಸಲು ಹೊರಟ.
ಹಾ! ಹಾ! ಹಾ! ಇಲ್ಲಿಯೂ ಸಹ ತಿನ್ನಲು ಎಂತಹ ಸದವಕಾಶ!
13
ಬಕಾಸುರ ಮತ್ತು ಭೀಮನ ನಡುವೆ ದೊಡ್ಡ ಹೋರಾಟವೇ ನಡೆಯಿತು. ಕೊನೆಗೆ ಬಕಾಸುರನ ಸಂಹಾರವಾಯಿತು.
14
ಭೀಮ ಮತ್ತು ಕುಂತಿಯನ್ನು ಗ್ರಾಮಸ್ಥರೆಲ್ಲರೂ ತುಂಬು ಹೃದಯದಿಂದ ಕೊಂಡಾಡಿದರು. ಬ್ರಾಹ್ಮಣ ದಂಪತಿಗಳ ಆತಿಥ್ಯದ ಋಣವನ್ನು ತೀರಿಸುವುದಕ್ಕಾಗಿ ಕುಂತಿಯು ತನ್ನ ಮಗನನ್ನೇ ಬಲಿಕೊಡಲು ಸಿದ್ಧಳಾಗಿದ್ದಳು.